# ಮದುವೆ ಬಳಿಕ ಕಾಜಲ್ ನಟಿಸುವರೆ?



ಲಾಕ್‌ಡೌನ್ ಮುಗಿದ ಬಳಿಕ ಒಂದೊಂದೇ ಸಿನಿಮಾಗಳ ಶೂಟಿಂಗ್ ಆರಂಭವಾಗುತ್ತಿದೆ. ಈ ಮಧ್ಯೆ ಲಾಕ್‌ಡೌನ್ ಬಳಿಕ ಬಾಲಿವುಡ್‌ನ ಮೊದಲ ಭಾರೀ ಮದುವೆಗೂ ದಿನಾಂಕ ನಿಗದಿಯಾಗಿದೆ. ಬಾಲಿವುಡ್‌ನ ಬೇಡಿಕೆಯ ನಟಿ ಕಾಜಲ್ ಅಗರ್‌ವಾಲ್ ಮುಂಬೈಯ ಉದ್ಯಮಿ ಗೌತಮ್ ಕಿಚ್ಲು ವನ್ನು ಅಕ್ಟೋಬರ್ 30ರಂದು ಮದುವೆ ಆಗಲಿದ್ದಾರೆ. ಸ್ವತಃ ಕಾಜಲ್, ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಈ ವಿಷಯವನ್ನು ಖಚಿತ ಪಡಿಸಿದ್ದಾರೆ.

ಈಕೆ ಹಿಂದಿಯಲ್ಲಿ ನಟಿಸಿದ 'ಸಿಂಗಂ' ಮತ್ತು 'ಸ್ಪೆಶಲ್ 26' ಹಿಟ್ ಆಗಿದ್ದವು. ಉಳಿದಂತೆ ಹಿಂದಿ ಚಿತ್ರಗಳಲ್ಲಿ ಕಾಜಲ್‌ಗೆ ಯಶಸ್ಸು ಅಷ್ಟೇನೂ ಕೈ ಹಿಡಿಯದಿದ್ದರೂ, ದಕ್ಷಿಣ ಭಾರತದ ಚಿತ್ರಗಳಲ್ಲಿ ಕಾಜಲ್ ಜನಪ್ರಿಯ ನಟಿ. ಅದರಲ್ಲೂ ತೆಲುಗಿನಲ್ಲಿ ಅಪಾರ ಬೇಡಿಕೆ ಇದೆ. ಕಮಲಹಾಸನ್ ಅಭಿನಯದ 'ಇಂಡಿಯನ್ 2' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿರುವ ಕಾಜಲ್ ಈ ಚಿತ್ರದ ಬಿಡುಗಡೆಗೂ ಮುನ್ನವೇ ಮದುವೆ ಆದರೆ ಚಿತ್ರದ ಗಳಿಕೆಗೆ ಏಟು ಬೀಳಬಹುದೇ ಎನ್ನುವ ಲೆಕ್ಕಾಚಾರವೂ ನಡೆದಿದೆ. 2004ರಲ್ಲಿ 'ಕ್ಯೋಂ.. ಹೋಗಯಾ ನಾ' ಹಿಂದಿ ಚಿತ್ರರಂಗದ ಮೂಲಕ ನಟನೆ ಆರಂಭಿಸಿದ ಕಾಜಲ್, 2007ರಲ್ಲಿ ತೆಲುಗಿನ 'ಲಕ್ಷ್ಮೀಕಲ್ಯಾಣಂ' ಚಿತ್ರದಲ್ಲಿ ಯಶಸ್ಸಿನ ರುಚಿ ಸವಿದಿದ್ದರು. ಡಾರ್ಲಿಂಗ್, ಬೃಂದಾವನಂ, ಮಿಸ್ಟರ್ ಫರ್ಫೆಕ್ಟ್, ಟೆಂಪಲ್ ಮುಂತಾದ ತೆಲುಗು ಚಿತ್ರಗಳಲ್ಲಿ ಭಾರೀ ಹೆಸರು ಮಾಡಿದರು. ತಮಿಳಿನಲ್ಲೂ ತುಪಾಕಿ, ಜಿಲ್ಲಾ, ವಿವೇಗಂ, ಮರ್ಸಲ್ ಮುಂತಾದ ಸೂಪರ್‌ಸ್ಟಾರ್‌ಗಳ ಚಿತ್ರಗಳಲ್ಲಿ ಮಿಂಚಿದರು. 35ರ ಹರೆಯದಲ್ಲಿ ಮದುವೆ ಆಗುವುದು ಸರಿಯಾದ ನಿರ್ಧಾರವೇ. ನಟಿ, ಗಾಯಕಿ ಮತ್ತು ಮಾಡೆಲ್ ಬೆಡಗಿಯಾಗಿ ದೊಡ್ಡ ಹೆಸರು ಪಡೆದಿರುವ ಕಾಜಲ್, ಮದುವೆಯ ಬಳಿಕ ನಟಿಸುತ್ತಾರೋ ಇಲ್ಲವೋ ಎನ್ನುವುದು ಈಗ ಅಭಿಮಾನಿಗಳ ಮುಂದಿರುವ ದೊಡ್ಡ ಪ್ರಶ್ನೆ.

# ಮರಳಿ ಬಂದ ಸ್ನೇಹಾ



ಒಬ್ಬರ ತರಹ ಇನ್ನೊಬ್ಬರು ಇರುವುದು ವರವೂ ಹೌದು, ಶಾಪವೂ ಹೌದು. ಸ್ನೇಹಾ ಉಲ್ಲಾಳ್ ವಿಷಯದಲ್ಲಂತೂ ಇದು ಅಕ್ಷರಶಃ ಸತ್ಯವಾದ ಮಾತು. ಬಾಲಿವುಡ್‌ನಲ್ಲಿ ಸಲ್ಮಾನ್ ಖಾನ್ ಚಿತ್ರದಲ್ಲಿ ನಾಯಕಿಯಾಗಿ ಅವಕಾಶ ಸಿಗುವುದೇ ದೊಡ್ಡ ಅದೃಷ್ಟ ಎಂದು ನಂಬುವ ಹುಡುಗಿಯರಿದ್ದಾರೆ. ಹಾಗಿರುವಾಗ ಸ್ನೇಹಾಗೆ ಈ ಅವಕಾಶ ಸಿಕ್ಕಿದ್ದು ಆಯಾಚಿತವಾಗಿ. ಮುಂಬೈಯಿಂದ ಮಸ್ಕತ್‌ಗೆ ಸಲ್ಮಾನ್ ಸೋದರಿ ಅರ್ಪಿತಾ ಪ್ರಯಾಣಿಸುತ್ತಿದ್ದಾಗ ಕಣ್ಣಿಗೆ ಬಿದ್ದವಳು ಸ್ನೇಹಾ. ಆಕೆ ಐಶ್ವರ್ಯ ರೈಯ ತದ್ರೂಪಿಯಂತೆ ಇದ್ದುದು ಅರ್ಪಿತಾಳಿಗೆ ವಿಶೇಷವಾಗಿ ಕಾಣಿಸಿತು. ಆಕೆಯ ಪರಿಚಯ ಮಾಡಿಕೊಂಡ ಅರ್ಪಿತಾ ನೇರವಾಗಿ ಸಲ್ಮಾನ್ ಖಾನ್‌ಗೆ ಫೋಟೋ ತೋರಿಸಿದಳು. ಸಲ್ಮಾನ್‌ನ 'ಲಕ್ಕಿ' ಚಿತ್ರಕ್ಕೆ ಸ್ನೇಹಾ ನಾಯಕಿಯಾಗಿ ಆಯ್ಕೆಯಾದಳು. ಇದು ನಡೆದದ್ದು 2005ರಲ್ಲಿ.

ಆದರೆ ಸಿನಿಮಾ ಗೆಲ್ಲಲಿಲ್ಲ. ಸ್ನೇಹಾ ಮೂಲೆಗುಂಪಾದಳು. ಐಶ್ವರ್ಯ ರೈ ತರಹವೇ ಕಾಣಿಸುವುದು ಸ್ನೇಹಾಗೆ ಶಾಪವಾಯಿತೆ... ಎನ್ನುವ ಪ್ರಶ್ನೆ ಕೆಲಕಾಲ ಚರ್ಚೆಗೊಳಗಾಯಿತು. ಆಗ ಸಂದರ್ಶನವೊಂದರಲ್ಲಿ ಸ್ನೇಹಾ ಕೂಡಾ ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಿದಳು. 'ಐಶ್ವರ್ಯ ರೈ ತರಹ ಕಾಣಿಸುವುದು ನನ್ನ ತಪ್ಪೇ? ಸಿನಿಮಾಕ್ಕೆ ಆಯ್ಕೆಯಾದಾಗ ಈ ರೀತಿಯ ಪ್ರಚಾರ ನಡೆದದ್ದು ನನಗೆ ಪ್ರಚಾರತಂತ್ರದಂತೆ ಗೋಚರಿಸಿತು. ಹಾಗಾಗಿ ನಾನೂ ಖುಷಿಯಿಂದ ಇದ್ದೆ. ಆದರೆ ಆ ಬಳಿಕ ನನ್ನನ್ನು ಪ್ರೇಕ್ಷಕರು ಐಶ್ವರ್ಯ ರೈ ಅವರಿಗೆ ಹೋಲಿಸಿ ತುಲನೆ ಮಾಡಿದರೂಂತ ಕಾಣಿಸುತ್ತದೆ. ನಾನು ಯಾರ ತರಹವೋ ಇದ್ದೇನೆ ಎನ್ನುವುದಕ್ಕಿಂತ ನನ್ನತನವನ್ನು ಪ್ರದರ್ಶಿಸಲು ಬಯಸುತ್ತೇನೆ. ಆದರೇನು ಮಾಡಲಿ.. ಜನ ನನ್ನಲ್ಲಿ ಐಶ್ವರ್ಯ ಅವರನ್ನು ಕಂಡು ನಿರಾಶರಾದರೆ ಅದು ನನ್ನ ತಪ್ಪೆ?' ಎಂದು ಸ್ನೇಹಾ ಹೇಳಿದ್ದರು.

ಒಬ್ಬ ನಟಿಯ ಹಾಗೆ ಇನ್ನೊಬ್ಬ ನಟಿ ಕೆಲವು ಕೋನಗಳಲ್ಲಿ ಕಾಣಿಸುವುದು ಹೊಸತೇನೂ ಅಲ್ಲ. ಜೀನತ್ ಅಮಾನ್ ತರಹ ಪರ್ವಿನ್ ಬಾಬಿ ಕಾಣಿಸುತ್ತಿದ್ದುದು, ಶ್ರೀದೇವಿ ತರಹ ದಿವ್ಯಾ ಭಾರತಿ ಕಾಣಿಸುತ್ತಿದ್ದುದು ಹಳೆಯ ಕಥೆ. ಆದರೆ ಸ್ವಲ್ಪ ಮಟ್ಟಿ ಈ ಹೋಲಿಕೆ ಪರ್ವೀನ್ ಅಥವಾ ದಿವ್ಯಾ ಅವರ ವೃತ್ತಿಜೀವನದ ಯಶಸ್ಸಿಗೆ ಅಡ್ಡಿ ಆಗಲಿಲ್ಲ. ಅವರಿಬ್ಬರೂ ತಮ್ಮದೇ ರೀತಿಯಲ್ಲಿ ಯಶಸ್ವಿ ಹೊಂದಿದರು. ದಿವ್ಯಾ ಭಾರತಿಯ ಅಕಾಲಿಕ ಮರಣ ಆಗಿಲ್ಲವಾಗಿದ್ದರೆ ಆಕೆ ಮುಂದಿನ ವರ್ಷಗಳಲ್ಲಿ ಬಾಲಿವುಡ್‌ನ ನಂಬರ್ ಒನ್ ತಾರೆಯಾಗುವ ಸಾಧ್ಯತೆಯೂ ಇತ್ತು. ಆದರೆ ಸ್ನೇಹಾ ಉಲ್ಲಾಳ್ ಪ್ರಕರಣದಲ್ಲಿ ಡಿಟ್ಟೋ ಐಶ್ವರ್ಯ ತರಹ ಇದ್ದುದೇ ಆಕೆಗೆ ಮುಳುವಾದಂತಿದೆ. ಅದೂ ಅಲ್ಲದೆ ಐಶ್ವರ್ಯ ರೈಯ ಜೊತೆಗೆ ಹಿಂದೆ ಸಲ್ಮಾನ್‌ಗೆ ನಿಕಟ ಬಾಂಧವ್ಯ ಇದ್ದುದೂ ಸ್ನೇಹಾರನ್ನು ಆ ದೃಷ್ಟಿಯಲ್ಲಿ ನೋಡಲು ಪ್ರೇಕ್ಷಕರಿಗೆ ಅಡ್ಡಿಯಾಗಿರಬೇಕು.

ಇದೆಲ್ಲ ಈಗ ಏಕೆ ನೆನಪಾಯಿತೆಂದರೆ, ಸ್ನೇಹಾ ಉಲ್ಲಾಳ್ ಈಗ, 15 ವರ್ಷಗಳ ಬಳಿಕ ಡಿಜಿಟಲ್ ಪ್ಲಾಟ್‌ಫಾರಂನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಝೀ 5 ಓಟಿಟಿ ಪ್ಲಾಟ್‌ಫಾರಂನಲ್ಲಿ 'ಎಕ್ಸ್ ಪೈರಿ ಡೇಟ್' ಎನ್ನುವ ಸೀರಿಯಲ್ ಥ್ರಿಲ್ಲರ್‌ನಲ್ಲಿ ಆಕೆ ಹೀರೋಯಿನ್ ಆಗಿ ಕಾಣಿಸಿಕೊಂಡಿದ್ದಾಳೆ. ಅಂದ ಹಾಗೆ ಈ ಚಿತ್ರದ ಕಥೆ ವಿವಾಹಬಾಹಿರ ಸಂಬಂಧದ ಕುರಿತು ಇದೆಯಂತೆ.

■ ಬಿಂದು